ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಅಸಲು ದಾವಾ ಸಂಖ್ಯೆ ***: 61/2015***

| | | |
|---|---|---|
| ಸಾಕ್ಷಿಯ ಹೆಸರು ಃ | ನಾಗೇಶ್ ಯು ಎಸ್ | ಡಿಡಬ್ಲ್ಯೂ.4 |
| ತಂದೆ ಹೆಸರುಃ | ಸೂರಪ್ಪ ಗೌಡ | |
| ವಯಸ್ಸುಃ | 58 ವರ್ಷ | |
| ಉದ್ಯೋಗಃ | ವ್ಯವಸಾಯ | |
| ವಾಸಃ | ಉಂಟುವಳ್ಳಿ ಗ್ರಾಮ, ನಾರ್ವೆ ಅಂಚೆ, ಕೊಪ್ಪ ತಾಲೂಕು | |

ದಿನಾಂಕ: 26/02/2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ವಿ ವಕೀಲರಿಂದಃ

ದಿನಾಂಕಃ24/01/2024 ರಂದು ಶ್ರೀಮತಿ ನಾಗರತ್ನ ಅವರು ತಮ್ಮ 3 ಜನ ಸಹೋದರರಾದ ಮೋಹನ, ಲಕ್ಷ್ಮಣ ಹಾಗೂ ರತ್ನಾಕರ ಅವರಿಗೆ ವಿಲ್ ಅನ್ನು ಮಾಡಿರುತ್ತಾರೆ. ಸದರಿ ದಾಖಲೆಯ ಸಮಯದಲ್ಲಿ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನನ್ನೊಂದಿಗೆ ನಾಗರಾಜ ಎಂಬುವವರು ಸದರಿ ವಿಲ್ ಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ದಾಖಲೆಗೆ ಶ್ರೀಮತಿ ನಾಗರತ್ನ ಅವರು ತಮ್ಮ ಸಹಿ ಮಾಡಿರುತ್ತಾರೆ. ಸದರಿ ವಿಲ್ ನಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ವಿಲ್ ಅನ್ನು ನಿಡಿ.11 ಎಂದೂ ಸಾಕ್ಷಿಯ ಸಹಿಯನ್ನು ನಿಡಿ.11(ಎ) ಎಂದೂ ಗುರುತಿಸಲಾಯಿತು. ಸಾಕ್ಷಿಯು ನಾಗರತ್ನಮ್ಮನವರ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿಡಿ.11(ಬಿ), 11(ಸಿ), 11(ಡಿ) ಹಾಗೂ ನಿಡಿ.11(ಇ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಬಿ ಎಸ್ ಎನ್., ವಕೀಲರಿಂದಃ

(ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು. )
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸ.ಇ . ಓ.

ಸಹಿ/-
(ನಂದಿನಿ ಎಮ್. ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ